Swabhimani Sahakari, Monthly, Posted at Wilson Garden Post Office 560027,
Posting Day 12th Reg. No. RNP/BGS/2094/20011-13 Licence to post
RNI No.: KARBILO 2004/18001

## ಶ್ರೇಷ್ಠ ಸಹಕಾರಿ

### ಉತ್ತಮ ಸಹಕಾರಿ ಕಾರ್ಯಕರ್ತ

# ಶ್ರೀ ರವೀಂದ್ರ ಎಲೆಗಾರ



**ಸಹಕಾರ ಕ್ಷೇತ್ರದ ಮೂಲಕ ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ದೃಢವಾಗಿ ನಂಬಿರುವ ಇವರು ಈ ಕ್ಷೇತ್ರದ ಅಭಿವೃದ್ಧಿಗೆ ಸದಸ್ಯರಲ್ಲಿ ಹಾಗು ಕಾರ್ಯಕರ್ತರುಗಳಿಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ತಿಳುವಳಿಕೆ ಅಗತ್ಯ. ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ಆಸಕ್ತಿವಹಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ.**

ಧಾರವಾಡ ಜಿಲ್ಲೆ ರಾಜ್ಯದ ಅಭಿವೃದ್ಧಿಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಸಹಕಾರಿ ಕ್ಷೇತ್ರದಲ್ಲಿಯೂ ಅನೇಕ ಮುಖಂಡರನ್ನು ಒದಗಿಸಿದೆ. ಒಂದು ರೀತಿಯಲ್ಲಿ ಸಹಕಾರ ಕ್ಷೇತ್ರ ತವರೂರಾಗಿದೆ. ಈ ಜಿಲ್ಲೆಯ ಅನೇಕ ಸಹಕಾರಿ ಮುಖಂಡರ ಸಾಲಿಗೆ ಸೇರುವ ಶ್ರೀ ರವೀಂದ್ರ ಎಲೆಗಾರರರವರು ಸೌಹಾರ್ದ ಸಹಕಾರಿಯ ಮಾಜಿ ನಿರ್ದೇಶಕ ಧಾರವಾಡದ ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿಯ ಹಾಲಿ ನಿರ್ದೇಶಕರು. ಶ್ರೀ ರವೀಂದ್ರ ಎಲೆಗಾರ ರಾಜ್ಯದ ಒಬ್ಬ ಉತ್ತಮ ಸಹಕಾರಿಯೆನಿಸಿದ್ದಾರೆ.

ದಿನಾಂಕ : 22–7–1959ರಲ್ಲಿ ಧಾರವಾಡದಲ್ಲಿ ಜನಿಸಿದ ಶ್ರೀಯುತರು ತಮ್ಮ ಪ್ರಾಥಮಿಕ ಮಾಧ್ಯಮಿಕ ಹಾಗು ಕಾಲೇಜು ಶಿಕ್ಷಣವನ್ನು ಧಾರವಾಡದಲ್ಲಿಯೇ ಮಾಡಿದರು. ಅರ್ಥಶಾಸ್ತ್ರ ಪದವೀದರರು. ಇವರ ಕುಟುಂಬದ ವೃತ್ತಿ ಕೃಷಿ ಹಾಗೂ ವ್ಯಾಪಾರ. ಕುಟುಂಬದ ವೃತ್ತಿಯನ್ನೇ ಮುಂದುವರೆಸಿಕೊಂಡು ಬಂದಿರುತ್ತಾರೆ. ಸಹಕಾರ ಕ್ಷೇತ್ರದ ಮೂಲಕ ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ದೃಢವಾಗಿ ನಂಬಿರುವ ಇವರು ಈ ಕ್ಷೇತ್ರದ ಅಭಿವೃದ್ಧಿಗೆ ಸದಸ್ಯರಲ್ಲಿ ಹಾಗು ಕಾರ್ಯಕರ್ತರುಗಳಿಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ತಿಳುವಳಿಕೆ ಅಗತ್ಯ. ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ಆಸಕ್ತಿ ವಹಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಶ್ರೀಯುತರು ಕಳೆದ 20 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಧಾರವಾಡ ಕೆ.ಸಿ.ಸಿ ಬ್ಯಾಂಕಿನ ಸದಸ್ಯರಾಗಿರುವ ಶ್ರೀಯುತರು ಚಂದರಗಿ ಕ್ರೀಡಾ ಸಹಕಾರಿಯ ನಿರ್ದೇಶಕರಾಗಿದ್ದಾರೆ. ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯ ಸದಸ್ಯರು ಮತ್ತು ಹೆಸ್ಕಾಂ ಧಾರವಾಡ, ಸಹಕಾರ ಭಾರತಿ ರಾಜ್ಯ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ತಮ್ಮ ಸಮಾಜದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತೀಯ ಲಾಡ್ ಸಮಾಜ ಧಾರವಾಡ ಇದರ ಉಪಾಧ್ಯಕ್ಷರಾಗಿ ಶ್ರೀ ಮುದಿ ಮಾರುತಿ ದೇವಸ್ಥಾನ ಟ್ರಸ್ಟ್ ಧಾರವಾಡ ಇದರ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿರುವ ಧಾರವಾಡದ ಶ್ರೀ ಸಾಯಿರಾಮ ಎಜನ್ಸಿಯ ಮಾಲೀಕರಾಗಿ ವ್ಯಾಪಾರಸ್ಥರಾಗಿ ಸಾಮಾಜಿಕ ಕಾರ್ಯಕರ್ತನಾಗಿ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831–2401551

## ಸಹಕಾರ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಲಿ ಅಭಿವೃದ್ಧಿಗೆ ಪೂರಕವಾಗಲಿ



ಪ್ರತಿವರ್ಷ ರಾಷ್ಟ್ರಾದ್ಯಂತ ನವೆಂಬರ್ 14 ರಿಂದ 20ರವರೆಗೆ ಅಖಿಲಭಾರತ ಸಹಕಾರ ಸಪ್ತಾಹವನ್ನು ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಮಾರ್ಗಸೂಚಿಯಂತೆ ಆಚರಿಸಲಾತ್ತಿದೆ.

ಪ್ರಸ್ತುತ ಇದು 57ನೇ ಸಹಕಾರ ಸಪ್ತಾಹವಾಗಿದೆ. ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (ಐ.ಸಿ.ಎಯವರು "ಹವಾಮಾನ ಬದಲಾವಣೆ: ಸಹಕಾರ ಸಂಸ್ಥೆಗಳಲ್ಲಿ ಚಿಂತನೆ : ಎಂಬುದಾಗಿ ಸಹಕಾರ ಸಪ್ತಾಹದ ಧ್ಯೇಯವನ್ನಾಗಿ ಘೋಶಿಸಿದ್ದಾರೆ ಹಾಗೂ ಸಪ್ತಾಹದ ಏಳು ದಿನಗಳನ್ನು ಒಂದೊಂದು ವಿಷಯದ ಬಗ್ಗೆ ಗಮನ ಹರಿಸುವಂತೆ ನಿಗದಿಪಡಿಸಿದ್ದಾರೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಸಪ್ತಾಹವನ್ನು ಯಶಸ್ವಿಯಾಗಿ, ಅರ್ಥ ಪೂರ್ಣವಾಗಿ ಆಚರಿಸಿ ಅಭಿವೃದ್ಧಿಯತ್ತ ನಡೆಯುವಂತಾಗಬೇಕು. ಇದು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಆಡಳಿತ ಮಂಡಳಿಯವರ ವಿಶೇಷ ವಿನಂತಿಯಾಗಿದೆ.

### 2011 ಜ. 1 ಸೌಹಾರ್ದ ಸಹಕಾರಿ ದಿನವಾಗಿ ಆಚರಿಸಲು ಮನವಿ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯು ಜಾರಿಗೆ ಬಂದು 10 ವರ್ಷಗಳು ತುಂಬುವ ಈ ದಿನವನ್ನು ರಾಜ್ಯದ್ಯಂತ ಸೌಹಾರ್ದ ಸಹಕಾರಿಗಳು ಸಭೆ ಸಮಾರಂಭಗಳನ್ನು ಎರ್ಪಡಿಸುವುದರ ಮೂಲಕ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಿ ಸೌಹಾರ್ದ ಸಹಕಾರಿಗಳ ಸಾಧನೆಯನ್ನು ಸಾರ್ವಜನಿಕರಿಗೆ ಮಾಹಿತಿನೀಡುವ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಕಾಯ್ಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗು ಆಡಳಿತ ಮಂಡಳಿಯವರು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಲ್ಲಿ ಮನವಿ ಮಾಡಿದ್ದಾರೆ.

### ಗಮನಿಸಿ :

"ಯಶಸ್ವಿ ಸಹಕಾರಿಗಳ ಯಶೋಗಾಥೆಯ ಅಂಕಣದಲ್ಲಿ ನಿಮ್ಮ ಸಹಕಾರಿಯ ಪ್ರಗತಿಯನ್ನು ಪ್ರಕಟಿಸಬೇಕೇ? ಹಾಗಿದ್ದಲ್ಲಿ ತಡಮಾಡದೆ ನಿಮ್ಮ ಸಹಕಾರಿಯ ಪ್ರಗತಿಚಿತ್ರ ಹಾಗೂ ಪ್ರಕಟಣೆಗೆ ಯೋಗ್ಯ 2–3 ಛಾಯಾಚಿತ್ರಗಳನ್ನು ಸಿ.ಡಿ.ಯಲ್ಲಿ ಹಾಕಿ ಕಳುಹಿಸಿಕೊಡಿ. "ವ್ಯಕ್ತಿ ಅಂಕಣದಲ್ಲಿ ನಿಮಗೆ ಪರಿಚಯವಿರುವ ಉತ್ತಮ ಸಹಕಾರಿಗಳ ಪರಿಚಯವನ್ನು ಪ್ರಕಟಿಸಬೇಕೆ? ಹಾಗಿದ್ದಲ್ಲಿ ಅವರ ಬಗ್ಗೆ ಸಾಧನೆಯ ವಿವಗಳನ್ನು ಹಾಗೂ ಒಂದು ಇತ್ತೀಚಿನ ಛಾಯಾಚಿತ್ರವನ್ನು ಕಳುಹಿಸಿ. ಇದರಲ್ಲಿ ಅವರ ಜನನ ತಾರೀಖು, ಹುಟ್ಟಿದ ಸ್ಥಳ, ತಂದೆ – ತಾಯಿಯರ ಹೆಸರು, ಕುಟುಂಬದ ವೃತ್ತಿ, ವಾಸಿಸುವ ಸ್ಥಳ, ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳ ಹೆಸರು, ಪಡೆದಿರುವ ಪ್ರಶಸ್ತಿಗಳು, ಇತರೆ ಕ್ಷೇತ್ರದಲ್ಲಿ ಅಂದರೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ, ಕಲೆ, ಸಂಗೀತ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮತ್ತು ಸೇವೆ ಸಲ್ಲಿಸುತ್ತಿರುವ ಹಾಗೂ ಪಡೆದ ಪ್ರಶಸ್ತಿಗಳ ವಿವರ ಮತ್ತು ಸಹಕಾರಿ ಕ್ಷೇತ್ರದ ಬಗ್ಗೆ ಅವರ ಅಭಿಪ್ರಾಯ ಮತ್ತು ಯುವಕರಿಗೆ ಅವರ ಸಂದೇಶಗಳು ಇರಬೇಕು.

ಇವರಿಂದ ಪ್ರಕಟಿತ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು– 560 002
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ, ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



ಸಂಪುಟ 7 : ಸಂಚಿಕೆ 11 : ನವೆಂಬರ್ 2010 : ವಾರ್ಷಿಕ ಚಂದಾ 50/– : ಬೆಲೆ ₹5



ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ..............................2
ಅವಲೋಕನ ಸಭೆ..........................3
ಸಾಮಾನ್ಯ ಸಭೆ..............................4
ಸಹಕಾರಿ ಸಮಾಚಾರಗಳು..............5
ಲೇಖನ......................................6
ಗುಣಮಟ್ಟ ತರಬೇತಿ......................7
ಶ್ರೇಷ್ಠ ಸಹಕಾರಿ..............................8



ಎಸ್.ಆರ್. ಸತೀಶಚಂದ್ರ
ಅಧ್ಯಕ್ಷರು

ನಾಡಿನ ಜನತೆಗೆ
ಕನ್ನಡ ರಾಜ್ಯೋತ್ಸವ, ಬೆಳಕಿನ ಹಬ್ಬ ದೀಪಾವಳಿ ಹಾಗೂ
57ನೇ ಅಖಿಲ ಭಾರತ ಸಹಕಾರ ಸಪ್ತಾಹದ
ಹಾರ್ದಿಕ ಶುಭಾಶಯಗಳು

- ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.



ಗುರುನಾಥ ಜ್ಯಾಂತೀಕರ
ಉಪಾಧ್ಯಕ್ಷರು

ಸೌಹಾರ್ದ ಸಹಕಾರಿಗಳ ಸಂಖ್ಯೆ 1487



# ಅಧ್ಯಕ್ಷರ ನುಡಿ....

ರಾಜ್ಯದ ಕ್ರೆಡಿಟ್ ಸಹಕಾರ ಸಂಘಗಳ ವ್ಯವಹಾರಕ್ಕೆ ಪ್ರೋತ್ಸಾಹ ನೀಡುವ ಈ ಸೌಲಭ್ಯವನ್ನು ಮಾಡಿಕೊಟ್ಟಿರುವುದಕ್ಕಾಗಿ ಭಾರತೀಯ ರಿಸರ್ವ ಬ್ಯಾಂಕಿನವರಿಗೆ ಹಾಗೂ ಈ ಕಾರ್ಯದ ನೇತೃತ್ವವಹಿಸಿ ಅದರಲ್ಲಿ ಸಫಲತೆಯನ್ನು ಸಾಧಿಸಿ ಕ್ರೆಡಿಟ್ ಸಹಕಾರಿಗಳಿಗೆ/ಸಂಘಗಳಿಗೆ ನೆರವು ನೀಡಿದ ರಾಜ್ಯದ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಪದಾಧಿಕಾರಿಗಳಾದ ಶ್ರೀ ರಾವಸಾಹೇಬ್ ಪಾಟೀಲ್ ಅಧ್ಯಕ್ಷರು ಶ್ರೀ ಗುರುನಾಥ ಜ್ಯಾಂತಿಕರ ಪ್ರಧಾನ ಕಾರ್ಯದರ್ಶಿಗಳು ಆಡಳಿತ ಮಂಡಳಿಯವರಿಗೆ ಈ ಕಾರ್ಯದಲ್ಲಿ ಸಂಪೂರ್ಣ ಸಹಕರಿಸಿದ ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರುಗಳಿಗೆ ಹಾಗೂ ಅಧಿಕಾರಿಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

# ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಕ್ರೆಡಿಟ್ ಅಸ್ಸೋಸಿಯೇಶನ್ ಅಭಿನಂದನಾರ್ಹ ಕಾರ್ಯ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಎಲ್ಲರ ಮನ ಹಾಗೂ ಮನೆಗಳಲ್ಲಿ ದೀಪಗಳ ಜ್ಯೋತಿಯು ಬೆಳಗುವುದರ ಜೊತೆಗೆ ಜ್ಞಾನದ ಜ್ಯೋತಿಯು ಬೆಳಗಲಿ. ಸುಖ ಶಾಂತಿ ನೆಮ್ಮದಿ ತರಲಿಯೆಂದು ಹಾರೈಸುತ್ತ ಎಲ್ಲ ಸೌಹಾರ್ದ ಸಹಕಾರಿಗಳ ಕ್ರಿಯಾಶೀಲ ಕಾರ್ಯಚಟುವಟಿಕೆಗಳಿಗೆ ಪೂರಕವಾಗಲಿ ಎಂದು ಆಶಿಸುತ್ತೇನೆ. ಕನ್ನಡ ರಾಜ್ಯೋತ್ಸವ ಆಚರಣೆಯ ಅಂಗವಾಗಿ ತಾಯಿ ಭುವನೇಶ್ವರಿದೇವಿ ಸಮಸ್ತ ಕನ್ನಡಿಗರಿಗೂ ಒಳ್ಳೆಯದನ್ನು ಮಾಡಿ ಕರ್ನಾಟಕವನ್ನು ಸುಖ, ಶಾಂತಿ ಹಾಗೂ ಸಮೃದ್ಧಿಯ ನಾಡಾಗುವಂತೆ ಹರಸಲಿ ಎಂದು ಪ್ರಾರ್ಥಿಸುತ್ತೇನೆ.

ರಾಜ್ಯದ ಪತ್ತಿನ ಸಹಕಾರ ಸಂಘಗಳಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ರೂ 50000/– ಗಳವರೆಗೆ ಥರ್ಡ ಪಾರ್ಟಿ ಚೆಕ್ ಕಲೆಕ್ಷನ್‌ಗೆ ಅವಕಾಶ ನೀಡಿರುವುದು ರಾಜ್ಯದ ಪತ್ತಿನ ಸಹಕಾರ ಸಂಘಗಳಿಗೆ/ಸೌಹಾರ್ದ ಸಹಕಾರಿಗಳಿಗೆ ಸಂತೋಷದ ವಿಷಯವಾಗಿದೆ. ಸಂಯುಕ್ತ ಸಹಕಾರಿಯ ಪರವಾಗಿ ಹಾಗು ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ 2–3 ವರ್ಷಗಳಿಂದ ಈ ಬಗ್ಗೆ ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತ ಬಂದಿದ್ದ ತರಬೇತಿ ಕಾರ್ಯಕ್ರಮಗಳಲ್ಲಿ ಹಾಗು ಸಭೆಗಳಲ್ಲಿ ಸಹಕಾರಿಗಳು ಥರ್ಡ ಪಾರ್ಟಿ ಚೆಕ್ ಕಲೆಕ್ಷನ್‌ಗೆ ಅವಕಾಶವಾಗುವಂತೆ ಪ್ರಯತ್ನಿಸಬೇಕು ಎಂಬ ವಿಷಯದ ಬಗ್ಗೆ ಸರ್ವಸಾಮಾನ್ಯವಾಗಿ ಪ್ರಸ್ತಾವನೆ ಇದ್ದೆ ಇರುತ್ತಿರುವುದರ ಗಂಭೀರತೆಯನ್ನು ಪರಿಗಣಿಸಿ ಸಂಯುಕ್ತ ಸಹಕಾರಿಯು ಸಂಪೂರ್ಣ ಸಹಕಾರವನ್ನು ನೀಡಿ ರಾಜ್ಯದ ಕ್ರೆಡಿಟ್ ಅಸೋಸಿಯೇಶನ್ ಮುಖಾಂತರ ಈ ಹೋರಾಟವನ್ನು ಮಾಡಲು ನಿಶ್ಚಯಿಸಿ ಅದರಂತೆ ಕ್ರಮವಿಡಲಾದ್ದುದನ್ನು ತಮ್ಮ ಗಮನಕ್ಕೆ ತರುತ್ತಾ ಅಂತಿಮವಾಗಿ ರಿಸರ್ವ್ ಬ್ಯಾಂಕ್‌ನವರು ನಮ್ಮ ವಿನಂತಿಗೆ ಸ್ಪಂದಿಸಿದ್ದಾರೆ. ರೂ 50000/– ರೂ.ಗಳವರೆಗೆ ಥರ್ಡ ಪಾರ್ಟಿ ಚೆಕ್ ಕಲೆಕ್ಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. "ಕೆವೈಸಿ" (Know your customer) ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಶರತ್ತನ್ನು ವಿಧಿಸಿದ್ದಾರೆ. ಸಹಕಾರಿಗಳ ವಿಶ್ವಾಸಾರ್ಹತೆಯ ದೃಷ್ಟಿಯಿಂದ ಇದು ಅಗತ್ಯ.

ರಾಜ್ಯದ ಕ್ರೆಡಿಟ್ ಸಹಕಾರ ಸಂಘಗಳ ವ್ಯವಹಾರಕ್ಕೆ ಪ್ರೋತ್ಸಾಹ ನೀಡುವ ಈ ಸೌಲಭ್ಯವನ್ನು ಮಾಡಿಕೊಟ್ಟಿರುವುದಕ್ಕಾಗಿ ಭಾರತೀಯ ರಿಸರ್ವ ಬ್ಯಾಂಕಿನವರಿಗೆ ಹಾಗೂ ಈ ಕಾರ್ಯದ ನೇತೃತ್ವವಹಿಸಿ ಅದರಲ್ಲಿ ಸಫಲತೆಯನ್ನು ಸಾಧಿಸಿ ಕ್ರೆಡಿಟ್ ಸಹಕಾರಿಗಳಿಗೆ/ಸಂಘಗಳಿಗೆ ನೆರವು ನೀಡಿದ ರಾಜ್ಯದ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಪದಾಧಿಕಾರಿಗಳಾದ ಶ್ರೀ ರಾವಸಾಹೇಬ್ ಪಾಟೀಲ್ ಅಧ್ಯಕ್ಷರು ಶ್ರೀ ಗುರುನಾಥ ಜ್ಯಾಂತಿಕರ ಪ್ರಧಾನ ಕಾರ್ಯದರ್ಶಿಗಳು ಆಡಳಿತ ಮಂಡಳಿಯವರಿಗೆ ಈ ಕಾರ್ಯದಲ್ಲಿ ಸಂಪೂರ್ಣ ಸಹಕರಿಸಿದ ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರುಗಳಿಗೆ ಹಾಗೂ ಅಧಿಕಾರಿಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹಾಗೂ ಪತ್ತಿನ ಸಹಕಾರಿ ಸಂಘಗಳು ಈ ಸೌಲಭ್ಯವನ್ನು ಚೆನ್ನಾಗಿ ಉಪಯೋಗಿಸಿಕೊಂಡಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ಕ್ರೆಡಿಟ್ ಸಹಕಾರ ಸಂಸ್ಥೆಗಳ ಕಾರ್ಯ ನಿರ್ವಹಣೆ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶವಾಗುತ್ತದೆ. ಈ ಅವಕಾಶವನ್ನು ಸದುಪಯೋಗಮಾಡಿಕೊಳ್ಳಲು ತಮಗೆಲ್ಲ ವಿನಂತಿ ಮಾಡಿಕೊಳ್ಳುತ್ತೇನೆ.

ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಕನ್ನಡ ರಾಜ್ಯೋತ್ಸವ, ಬೆಳಕಿನ ಹಬ್ಬ ದೀಪಾವಳಿಯ ಹಾಗೂ 57ನೇ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು.

**ಎಸ್. ಆರ್. ಸತೀಶಚಂದ್ರ.**
ಅಧ್ಯಕ್ಷರು

### ತುಮಕೂರು ಜಿಲ್ಲಾ ಸಹಕಾರ ಯೂನಿಯನ್ನಿನಲ್ಲಿ

# ಸೌಹಾರ್ದ ಸಹಕಾರಿಗಳಿಗೆ ಗುಣಮಟ್ಟ ನಿರ್ವಹಣಾ ತರಬೇತಿ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ ದಿನಾಂಕ 29-10-2010 ರಂದು ಗುಣಮಟ್ಟ ನಿರ್ವಹಣಾ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಉದ್ಘಾಟಿಸಿ ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯಾಚರಣೆಯು ಅವುಗಳ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. ಸೌಹಾರ್ದ ಸಹಕಾರಿಗಳ ಗುಣಮಟ್ಟ ಉತ್ತಮವಾಗಿರಬೇಕು. ಅವುಗಳ ಕಾರ್ಯನಿರ್ವಹಣೆ ಸಾರ್ವಜನಿಕರಿಗೆ, ಸದಸ್ಯರಿಗೆ ಹಾಗೂ ಸರಕಾರಕ್ಕೆ ತೃಪ್ತಿತರುವಂತಿರಬೇಕು. ಹಾಗಾಗಬೇಕಾದರೆ ವಿಷಯಗಳ ಬಗ್ಗೆ ಅಧ್ಯಯನ ಹಾಗೂ ತಿಳುವಳಿಕೆ ಅಗತ್ಯವಾಗುತ್ತದೆ. ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಕಾರ್ಯನಿರ್ವಹಣೆಯ ಜ್ಞಾನ ಹೆಚ್ಚುತ್ತದೆ. ಕಾರ್ಯದಕ್ಷತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ನಿನ ಅಧ್ಯಕ್ಷ ಶ್ರೀ ಗಂಗಣ್ಣನವರು ಮಾತನಾಡಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ರಾಜ್ಯದ ಎಲ್ಲ ಜಿಲ್ಲಾ ಸಹಕಾರ ಯೂನಿಯನ್‌ಗಳ ಮೂಲಕ ಸಹಕಾರ ಚಳವಳಿಯ ಅಭಿವೃದ್ಧಿಗೆ ಪೂರಕವಾಗುವ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾತ್ತಿದೆ. ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿಗಳು ಈ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮಗಳ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರ ಚಳುವಳಿ ಇದೀಗ ದಶಮಾನೋತ್ಸವ ಆಚರಿಸುವ ಸಿದ್ಧತೆಯಲ್ಲಿರುವಾಗ ರಾಜ್ಯದ ಜನತೆ ಹಾಗೂ ಸರಕಾರಗಳು ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಉತ್ತಮಗುಣಮಟ್ಟವನ್ನು ನೀರಿಕ್ಷಿಸುತ್ತವೆ. ಹೀಗಾಗಿ ಗುಣಮಟ್ಟ ನಿರ್ವಹಣೆಗೆ ಶಿಕ್ಷಣ ತರಬೇತಿಯಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತುಮಕೂರು ಮರ್ಚೆಂಟ್ಸ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಎನ್.ಎಸ್. ಜಯಕುಮಾರರವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಕೆ.ಪಿ.ಗುರುಸ್ವಾಮಿಯವರು ಸಾಲ ವಸೂಲಾತಿಯ ಬಗ್ಗೆ ಶ್ರೀ ಪಾವಟೆಯವರು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ವ್ಯಕ್ತಿತ್ವ ವಿಕಸನ ಹಾಗೂ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರವರು ಸೌಹಾರ್ದ ಸಹಕಾರ ಕಾಯ್ದೆ ಹಾಗು ರಾಜ್ಯದಲ್ಲಿ ಸೌಹಾರ್ದ ಸಹಕಾರ ಚಳುವಳಿಯ ಪ್ರಗತಿ ಬಗ್ಗೆ ಉಪನ್ಯಾಸ ನೀಡಿದರು.

ತುಮಕೂರು ಜಿಲ್ಲೆಯ 30 ಸೌಹಾರ್ದ ಸಹಕಾರಿಗಳಿಂದ 70 ಜನ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದರು.

## ಸೌಹಾರ್ದ ಸಹಕಾರಿಗಳಿಗೆ ಎಸ್.ಆರ್. ಸತೀಶಚಂದ್ರರವರ ಭೇಟಿ



**ರಾಣೆಬೆನ್ನೂರಿನ ಚನ್ನೇಶ ಸೌಹಾರ್ದ ಸಹಕಾರಿಯಲ್ಲಿ ಇ-ಸ್ಟಾಂಪಿಂಗ ದಾಖಲೆ ವ್ಯವಹಾರ-ಅಭಿನಂದನೆ.**

ರಾಣೆಬೆನ್ನೂರಿನ ಚನ್ನೇಶ ಸೌಹಾರ್ದ ಸಹಕಾರಿಯಲ್ಲಿ ದಿನಾಂಕ 28-10-2010 ರಂದು ಒಂದೆ ದಿನದಲ್ಲಿ 1140 ಇ-ಸ್ಟಾಂಪಿಂಗನಭಾಪಾಕಾಗದಗಳನ್ನು ತೆಗೆದು ಸಾರ್ವಜನಿಕರಿಗೆ ಉತ್ತಮವಾದ ಸೇವೆ ಸಲ್ಲಿಸಿರುವುದಕ್ಕೆ ಸ್ಟಾಕ್ ಹೊಲ್ಡಿಂಗ ಕಾರ್ಪೋರೇಶನ್ ಆಫ್ ಇಂಡಿಯಾದವರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಮತ್ತು ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ದಿನಾಂಕ : 29-10-2010 ರಂದು ತುಮಕೂರಿನ ಶ್ರೀ ಶಿವಾಜಿ ಸೌಹಾರ್ದ ಸಹಕಾರಿ, ಅಭ್ಯುದಯ ಸೌಹಾರ್ದ ಸಹಕಾರಿ ಹಾಗು ಗುರುಕುಲ ಸೌಹಾರ್ದ ಸಹಕಾರಿಗಳಿಗೆ ಸಂಜೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಶ್ರೀ ಚನ್ನೇಶ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಪರೀಶೀಲನೆ ಮಾಡಿದರು.

ದಿನಾಂಕ 30-10-2010 ರಂದು ಶಿಗ್ಗಾವಿಯ ಹಸಿರು ಸೌಹಾರ್ದ ಸಹಕಾರಿ ಹಾಗು ನವಕರ್ನಾಟಕ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಪರೀಶೀಲನೆ ಮಾಡಿದರು.

ಭೇಟಿ ಸಮಯದಲ್ಲಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗು ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದು ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಅಧ್ಯಕ್ಷರು ಸದರಿ ಸಹಕಾರಿಗಳ ಪ್ರಗತಿಗೆ ಸಲಹೆಗಳನ್ನು ನೀಡುವುದರ ಜೊತೆಗೆ ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿಯ ಮಾರ್ಗ ಸೂಚಿಗಳನ್ನು ಪಾಲಿಸುವುದರ ಜೊತೆಗೆ ನಿಮ್ಮ ನಿಮ್ಮ ಸಹಕಾರಿಯ ಉಪವಿಧಿಗಳಲ್ಲಿ ವಿಧಿತವಾಗಿರುವಂತೆ ಕಾರ್ಯನಿರ್ವಹಿಸಬೇಕು.

ಸದಸ್ಯರಿಗೆ ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸುವಂತಾಗಬೇಕು ಮತ್ತು ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ತಿಳಿಸಿದರು.

# ಒತ್ತಡ ನಿರ್ವಹಣೆ : ಭಾಗ-2 ನೆಮ್ಮದಿಗಾಗಿ ಹುಡುಕಾಟ

**ಒಂದು ದಿನ ಏನಾಯಿತು ಗೊತ್ತೆ...**

ಮನುಷ್ಯ ದೇವರನ್ನು ಕುರಿತು ನೆಮ್ಮದಿಗಾಗಿ ತಪಸ್ಸು ಮಾಡಿದ. ದೇವರು ಪ್ರತ್ಯಕ್ಷನಾಗಿ "ಏನು ವರ ಬೇಕು?" ಎಂದ. "ನನಗೆ ನೆಮ್ಮದಿ ಬೇಕು"-ಎಂದು ಮನುಷ್ಯ ಕೇಳಿದ.

ದೇವರು (ನಗುತ್ತಾ):- ನೆಮ್ಮದಿ ನಿನ್ನಲ್ಲಿಯೇ ಇದೆ. ಅದನ್ನು ನಾನು ಹೇಗೆ ಕೊಡಲಿ?

ಮನುಷ್ಯ:- ನನ್ನನ್ನೇ ಸೃಷ್ಟಿಸಿರುವ ನೀನು, ನನ್ನಲ್ಲಿರುವ ನೆಮ್ಮದಿಯನ್ನು ನನಗೆ ತೋರಿಸಲಾರೆಯಾ?

ದೇವರು:-ಅಸಂಭವ! ಮನುಷ್ಯನನ್ನು ಸೃಷ್ಟಿಸುವುದು ನನ್ನ ಕೆಲಸ..ನೆಮ್ಮದಿಯನ್ನು ಕಂಡುಕೊಳ್ಳುವುದು ಮನುಷ್ಯನ ಕೆಲಸ.

ಮನುಷ್ಯ:-ಹಾಗಾದರೆ..ನಾನು ತಪಸ್ಸು ಮಾಡಿದ್ದು ವ್ಯರ್ಥವಾಯಿತೆ..?

ದೇವರು:-ಇಲ್ಲ.. ವ್ಯರ್ಥವಾಗಿಲ್ಲ. ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನೀನು ನೆಮ್ಮದಿಯನ್ನು ಕಂಡುಕೊಳ್ಳಲು ನಿನಗೊಂದು ಅವಕಾಶ ನೀಡುತ್ತೇನೆ. ಗಮನವಿಟ್ಟು ಕೇಳು.



ಶ್ರೀ ಬಿ. ಎ. ಮಹದೇವಪ್ಪ
ಜಂಟಿನಿಬಂಧಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಡಿ.ಸಿ.ಸಿ.ಬ್ಯಾಂಕ್.ನಿ., ಶಿವಮೊಗ್ಗ.

ಮನುಷ್ಯನಿಗೆ ಬಹಳ ಸಂತೋಷವಾಯಿತು. ನಿಧಿ ಸಿಕ್ಕಿದಷ್ಟೇ ಸಂಭ್ರಮ ಪಟ್ಟ. ದೇವರು ಏನು ಹೇಳಬಹುದು..ಎಂಬ ಕುತೂಹಲದಿಂದ ದೇವರನ್ನೇ ನೋಡುತ್ತಾ ನಿಂತುಬಿಟ್ಟ.

ದೇವರು:- ಭಕ್ತಾ! ನೀನು ಇಲ್ಲಿಂದ ಪೂರ್ವದಿಕ್ಕಿಗೆ ಹೋದರೆ..ಸ್ವಲ್ಪ ದೂರದಲ್ಲಿಯೇ ಒಂದು ಮನೆ ಕಾಣಿಸುತ್ತದೆ. ಆ ಮನೆಯ ಹೆಸರು 'ಜೀವನ'. ನೀನು ಆ ಮನೆಗೆ ಹೋಗು. ಜೀವನ ಎಂಬ ಮನೆಯಲ್ಲಿ ಶ್ರೀಮಂತಿಕೆ, ಕೀರ್ತಿ, ಸುಖ, ನೆಮ್ಮದಿ ಎಂಬ ರೂಮುಗಳಿವೆ. ನಿನಗೆ ಯಾವ ರೂಮು ಬೇಕೋ...ನೀನೇ ಆಯ್ದುಕೋ (ಎಂದು ಹೇಳಿ ದೇವರು ಮಾಯವಾದ).

ಮನುಷ್ಯನಿಗೆ ಆನಂದವಾಯಿತು. "ನನ್ನ ತಪಸ್ಸು ಸಿದ್ಧಿಸಿತು... ನೆಮ್ಮದಿ ನನಗೆ ಸಿಕ್ಕೇ ಸಿಗುತ್ತದೆ" ಎಂಬ ಉತ್ಸಾಹದಿಂದ 'ಜೀವನ' ಎಂಬ ಮನೆಯನ್ನು ಹುಡುಕುತ್ತಾ, ದೇವರು ಹೇಳಿದಂತೆ ಪೂರ್ವ ದಿಕ್ಕಿನತ್ತ ಹೊರಟ...

ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ, ಒಂದು ದೊಡ್ಡ ಮನೆ ಕಾಣಿಸಿತು. ತಕ್ಷಣವೇ ಮನುಷ್ಯ ಆ ಮನೆಯ ಬಳಿ ಓಡಿದ. ಆ ಮನೆಯ ಹೆಸರನ್ನು ಎರಡು..ಮೂರು ಬಾರಿ ಓದಿದ.

ಹೌದು! ಆ ಮನೆಯ ಹೆಸರು 'ಜೀವನ'. ಸಂತೋಷದಿಂದ ಮನೆಯ ಒಳಗೆ ಕಾಲಿಟ್ಟ. "ಅಬ್ಬಾ! ಮನೆ ಎಷ್ಟು ಸುಂದರವಾಗಿದೆ! ನೋಡಿದರೆ ಮತ್ತೊಮ್ಮೆ ನೋಡಲೇಬೇಕೆನಿಸುವ ಮನೆ..ಅಲ್ಲಿಯೇ ಇದ್ದು ಬಿಡಬೇಕೆನ್ನುವ ಸೊಗಸಾದ ಮನೆ. ಮನುಷ್ಯನಿಗೆ ಬಹಳ ಇಷ್ಟವಾಯಿತು.

ಮನೆಯ ಒಳಗೆಲ್ಲಾ ಓಡಾಡಿದ. ಎಲ್ಲಾ ರೂಮುಗಳನ್ನು ನೋಡಿದ. ದೇವರು ಹೇಳಿದಂತೆ...ಶ್ರೀಮಂತಿಕೆ, ಕೀರ್ತಿ, ಸುಖ ಮತ್ತು ನೆಮ್ಮದಿ ಎಂಬ ನಾಲ್ಕು ರೂಮುಗಳಿದ್ದವು. ಅವುಗಳಲ್ಲಿ ಮೂರು ರೂಮುಗಳಂತೂ ಒಂದಕ್ಕೊಂದು ಸುಂದರವಾಗಿದ್ದವು. ಒಂದು ರೂಮು ಮಾತ್ರ ಬಹಳ ಸಿಂಪಲ್ ಆಗಿತ್ತು. ಯಾವ ಆಕರ್ಷಣೆಯೂ ಇರಲಿಲ್ಲ. ಏಕೋ..ಏನೋ..ಆ ರೂಮು ಮನುಷ್ಯನಿಗೆ ಇಷ್ಟವಾಗಲಿಲ್ಲ. ನೋಡಿಯೂ ನೋಡದಂತೆ ಮುಂದೆ ಹೋದ.

ಆ ರೂಮಿನ ಹೆಸರೇ 'ನೆಮ್ಮದಿ'.

ಮನುಷ್ಯ ಮೊದಲು 'ಶ್ರೀಮಂತಿಕೆ' ರೂಮಿಗೆ ಹೋದ. ಅವನಿಗೆ ಬಹಳ ಇಷ್ಟವಾಯಿತು. ಇಲ್ಲಿಯೇ ಇರೋಣವೆಂದು ಆ ರೂಮನ್ನು ಆಯ್ಕೆ ಮಾಡಿಕೊಂಡು ಅಲ್ಲಿಯೇ ಇರತೊಡಗಿದ.

ದುಡ್ಡು...ದುಡ್ಡು...ಎಲ್ಲೆಲ್ಲೂ ದುಡ್ಡು! ರೂಮಿನ ತುಂಬಾ ಹಣವೋ ಹಣ. ಆ ಹಣದಿಂದ ನಗ-ನಾಣ್ಯ..ಐಷಾರಾಮಿ ಕಾರುಗಳನ್ನು ಕೊಂಡ. ಮನೆಯ ತುಂಬಾ ಕೆಲಸಗಾರರು. ಅವನಿಗೆ ಏನು ಬೇಕೋ ಎಲ್ಲವೂ ಸಿಗತೊಡಗಿತು. ಲೈಫ್ ಎಂಜಾಯ್ ಮಾಡತೊಡಗಿದ.

ಕೆಲವು ದಿನಗಳು ಕಳೆದ ನಂತರ...

ಏಕೋ..ಏನೋ..ಅವನ ಮನಸ್ಸಿನಲ್ಲಿ ತೃಪ್ತಿಯೇ ಇಲ್ಲ. ದುಡ್ಡು ಬರುತ್ತಿದೆ. ದುಡ್ಡು ಹೋಗುತ್ತಿದೆ. ಹಣವೇ ಸರ್ವಸ್ವ ಎಂದು ಭಾವಿಸಿದ್ದ ಅವನಿಗೆ.. 'ಜೀವನ ಇಷ್ಟೇನಾ?' ಎನಿಸಿತು. ಇನ್ನೂ ಏನೋ ಬೇಕೆನಿಸಿತು. ತೊಳಲಾಟ ಉಂಟಾಯಿತು.

ಕೂಡಲೇ ಅವನು 'ಕೀರ್ತಿ' ಎಂಬ ಇನ್ನೊಂದು ರೂಮಿಗೆ ಬಂದ...

ವಂಡರ್‌ಫುಲ್..! ಎಷ್ಟೊಂದು ಗೌರವ..!ಎಷ್ಟೊಂದು ಸನ್ಮಾನಗಳು! ಗದೆ-ಕಿರೀಟಗಳಿಗೆ ಕೊನೆಯೇ ಇಲ್ಲದ ಸನ್ಮಾನಗಳು. ಪುರಸ್ಕಾರಗಳಿಗೆ ಲೆಕ್ಕವೇ ಇಲ್ಲ. ಸಾವಿರಾರು ಅಭಿಮಾನಿಗಳು. ಪ್ರತಿದಿನ ಪತ್ರಿಕೆಗಳಲ್ಲಿ..ದೂರದರ್ಶನದಲ್ಲಿ ಅವನ ಸಂದರ್ಶನದ ಪ್ರಸಾರ. ಪ್ರತಿಯೊಬ್ಬರ ಮನೆಯಲ್ಲೂ ಆತನ ಹೆಸರೇ ಕೇಳಿ ಬರುತ್ತಿತ್ತು. ಮನುಷ್ಯನಿಗೆ ಖುಷಿಯೋ... ಖುಷಿ!..ಆನಂದವೋ.. ಆನಂದ.

ಸ್ವಲ್ಪ ದಿನ ಹೀಗೆಯೇ ಕಳೆಯಿತು...

'ಕೀರ್ತಿ'ಯ ರೂಮಿನಲ್ಲೂ ಅವನಿಗೆ ತೃಪ್ತಿ ಸಿಗಲಿಲ್ಲ. ಇದರಲ್ಲೂ ಅವನ ಆಸಕ್ತಿ ಕಡಿಮೆಯಾಗುತ್ತಾ ಬಂತು. ಇನ್ನೂ ಏನೋ ಬೇಕು ಅನಿಸತೊಡಗಿತು.

ಮುಂದೆ... 'ಸುಖ'ದ ರೂಮಿಗೆ ಹೋದ..

ಓಹ್! ಎಷ್ಟೊಂದು ಸುಖ. ದೇಹಕ್ಕೆ ಆನಂದ ಕೊಡುವ ಮಧು-ಮಾನಿನಿಯರಿಂದ ಆ ರೂಮು ತುಂಬಿ ಹೋಗಿತ್ತು. ಖರ್ಚು ಮಾಡಲು ಹಣವೂ ಇತ್ತು. ಈ ಬಾಳು ಸೊಗಸೆಂದುಕೊಂಡ.

ತನ್ನನ್ನು ತಾನು ಮರೆತ. ಈ ಸುಖ ಶಾಶ್ವತ ಎಂದುಕೊಂಡ! ಸುಖದ ರೂಮಿನಲ್ಲಿಯೇ ಬಹಳ ಕಾಲ ಕಳೆದ. ಸುಖದ ಸುಪ್ಪತ್ತಿಗೆಯಲ್ಲಿದ್ದಾಗ ಎಲ್ಲವನ್ನೂ..ಎಲ್ಲರನ್ನೂ ಮರೆತ. ಕಾಲಚಕ್ರ ಉರುಳಿತು.. ಅವನಿಗೆ ಜೀವನ ಯಾಂತ್ರಿಕ ಎನಿಸತೊಡಗಿತು......ನಿಸ್ಸಾರವಾಯಿತು.

ತನಗೆ ಬೇಕಿದ್ದು ಸಿಗಲಿಲ್ಲವಲ್ಲ ಎಂದು ಚಡಪಡಿಸಿದ.

ಇದ್ದಕ್ಕಿದ್ದಂತೆ ನೆಮ್ಮದಿಯ ರೂಮು ಜ್ಞಾಪಕಕ್ಕೆ ಬಂತು. ನೋಡಿಯೂ...ನೋಡದಂತೆ ಹೋಗಿದ್ದ ರೂಮಿನ ಹತ್ತಿರ ಈಗ ತಾನಾಗಿಯೇ ಬಂದ. ಆ ರೂಮಿನ ಬಾಗಿಲು ತೆರೆದಿರಲಿಲ್ಲ. ಬಾಗಿಲನ್ನು ಬಡಿದ.. ಯಾರೂ ತೆರೆಯಲಿಲ್ಲ. ಬಾಗಿಲನ್ನು ತಳ್ಳಲು ಪ್ರಯತ್ನಿಸಿದ. ಆದರೆ ತಳ್ಳುವ ಶಕ್ತಿಯೂ ಅವನಲ್ಲಿರಲಿಲ್ಲ.

ಏನು ಮಾಡುವುದು...? ಅವನಿಗೆ ವಯಸ್ಸಾಗಿತ್ತು. ಕಾಲ ಮಿಂಚಿ ಹೋಗಿತ್ತು. ನೆಮ್ಮದಿಯ ರೂಮಿಗೆ ಪ್ರವೇಶ ಸಿಗಲಿಲ್ಲ...ಕೊನೆಗೆ ನೆಮ್ಮದಿಯೂ ಸಿಗಲಿಲ್ಲ!.

ಬರೀ ಪಶ್ಚಾತ್ತಾಪ ಮಾತ್ರ ಅವನಲ್ಲಿ ಉಳಿಯಿತು.

ಆತ್ಮೀಯ ಓದುಗರೇ...

ಇದೊಂದು ಕಾಲ್ಪನಿಕ ಕಥೆ. ಆದರೂ ಇದರಲ್ಲಿ ಒಂದು ಮೆಸೇಜ್ ಇದೆ. ನಮಗೆ ಶ್ರೀಮಂತಿಕೆ, ಕೀರ್ತಿ, ಸುಖ ಇವೆಲ್ಲವೂ ಬೇಕು. ಇವು ಅಗತ್ಯ ಕೂಡಾ. ಆದರೆ ನಮಗೆ ಬಹು ಮುಖ್ಯವಾಗಿ ಬೇಕಾದದ್ದು ನೆಮ್ಮದಿ. ನೆಮ್ಮದಿಯೇ ಇಲ್ಲದ ಶ್ರೀಮಂತಿಕೆ, ಕೀರ್ತಿ, ಸುಖ ಇವುಗಳು ಎಷ್ಟಿದ್ದರೂ ಪ್ರಯೋಜನವಿಲ್ಲ. ಎಲ್ಲವೂ ಇದ್ದು..ನೆಮ್ಮದಿ ಇಲ್ಲದೇ...ಕೊನೆಗೆ ಪಶ್ಚಾತ್ತಾಪಕ್ಕೆ ಬಲಿಯಾದ ನಮ್ಮ ಕಥಾನಾಯಕ 'ಮನುಷ್ಯ'ನ ಉದಾಹರಣೆಯಂತಾಗಬಾರದು ನಮ್ಮ ಜೀವನ.

ಪಶ್ಚಾತ್ತಾಪದ ಬದುಕು ನಮ್ಮದಾಗಬಾರದು. ಜೀವನದಲ್ಲಿ ಬರೀ ಸುಖವೇ ಇರುವುದಿಲ್ಲ. ಅಥವಾ ಜೀವನ ಪೂರ್ತಿ ಕಷ್ಟವೂ ಇರುವುದಿಲ್ಲ. ಬದುಕು ಕಷ್ಟ – ಸುಖಗಳ ಮಿಶ್ರಣ. ಸುಖ ಬಂದಾಗ ಹಿಗ್ಗದೇ..ಕಷ್ಟ ಬಂದಾಗ ಕುಗ್ಗದೇ, ಸಮತೋಲನದಿಂದ ನಾವು ಬಾಳಬೇಕಾಗುತ್ತದೆ. ನಮ್ಮ ಜೀವನದಲ್ಲಿ ಸುಖ-ನೆಮ್ಮದಿಯನ್ನು ಕಂಡುಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಸ್ವಾಮಿ ವಿವೇಕಾನಂದರು ಹೇಳಿರುವಂತೆ "ನಿಮ್ಮ ಹಣೆಯ ಬರಹದ ಶಿಲ್ಪಿ ನೀವೇ" ಎಂಬ ಮಾತನ್ನು ನಾವೆಲ್ಲರೂ ಅರ್ಥಮಾಡಿಕೊಂಡು, ನಮ್ಮ ಬದುಕನ್ನು ನಾವೇ ಮಧುರಗೊಳಿಸೋಣ.

ಈ ನಿಟ್ಟಿನಲ್ಲಿ ಒತ್ತಡ ನಿರ್ವಹಣೆ ಎಂಬ ವಿಷಯ ಇಲ್ಲಿ ಪ್ರಸ್ತುತವಾಗುತ್ತದೆ...

ಒತ್ತಡ ಪ್ರತಿಯೊಬ್ಬ ವ್ಯಕ್ತಿಯ ಜೀವನದ ಜೀವಾಳ. ಮಾನವನ ಸಮಸ್ತ ಸಾಧನೆಗಳ-ಸಮಸ್ತ ಸಮಸ್ಯೆಗಳ ಮೂಲ.

– ನಾಗರಿಕತೆ ಬೆಳೆದಷ್ಟೂ ಒತ್ತಡವು ಬೆಳೆಯುತ್ತಿದೆ.
– ವಿಜ್ಞಾನ ಮತ್ತು ತಾಂತ್ರಿಕ ಜ್ಞಾನ ಬೆಳೆದಷ್ಟು ಒತ್ತಡವೂ ಬೆಳೆಯುತ್ತಿದೆ.
– ಒತ್ತಡ ಒಂದು ಕಾರ್ಯಸಾಧನೆಗೆ ಪೋಷಕವಾದಾಗ ಬದುಕು ಬಂಗಾರವಾಗುತ್ತದೆ.
– ಒತ್ತಡ ಒಂದು ಕಾರ್ಯಸಾಧನೆಗೆ ಅಡ್ಡಿಯಾದಾಗ ಬದುಕು ಬೇಡವಾಗುತ್ತದೆ.

ಒತ್ತಡ ಇಲ್ಲದಿದ್ದರೆ... ಮಾನವ ದೀರ್ಘಕಾಲ ಬದುಕಲಾರ; ಸುಖ-ದುಃಖಗಳನ್ನು ಅನುಭವಿಸಲಾರ;

ಯಾವ ಸಾಧನೆಯನ್ನೂ ಮಾಡಲಾರ.

# ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳ ಅವಲೋಕನಾ ಸಭೆ

ದಿನಾಂಕ : 30–10–2010 ರಂದು ಹುಬ್ಬಳ್ಳಿಯ ಚೇಂಬರ್ ಆಫ್ ಕಾಮರ್ಸ್‌ನ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ ನಡೆಯಿತು. ಈ ಸಭೆಯಲ್ಲಿ ಹಾವೇರಿ ಜಿಲ್ಲೆಯ ಪ್ರತಿನಿಧಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಮ್.ಬಿ. ಕಲಾಲ್‌ರವರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಸ್ಥಾಯಿ ಸಮಿತಿ ಸದಸ್ಯ ಶ್ರೀ ಅಮೃತ ಜೋಶಿಯವರು ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿಯ ನಿರ್ದೇಶಕ ಶ್ರೀ ರವೀಂದ್ರ ಎಲೆಗಾರರವರು ಉಪಸ್ಥಿತರಿದ್ದು ಸೌಹಾರ್ದ ಸಹಕಾರಿಗಳ ಪ್ರಗತಿಯನ್ನು ಅವಲೋಕನೆ ಮಾಡಿದರು. ಸಭೆಯಲ್ಲಿ ಎರಡೂ ಜಿಲ್ಲೆಗಳಿಂದ ಒಟ್ಟಾರೆ 26 ಸೌಹಾರ್ದ ಸಹಕಾರಿಗಳಿಂದ (ಹಾವೇರಿ 16 ಧಾರವಾಡ 10) 60 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳು 2009–10ರಲ್ಲಿ ಜರುಗಿಸಿದ ಕಾರ್ಯಕ್ರಮಗಳು, 2010–11ನೇ ಸಾಲಿನ ಯೋಜಿತ ಕಾರ್ಯಕ್ರಮಗಳು, ಸಹಕಾರಿಗಳು ಹಮ್ಮಿಕೊಂಡಿರುವ ಬಡ್ಡಿಯೇತರ ಆದಾಯದ ಯೋಜನೆಗಳು, ದಶಮಾನೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳು, ಕಾಯ್ದೆಗನುಗುಣವಾಗಿ ಲಾಭವಿಲೆವಾರಿ ಹೂಡಿಕೆಗಳು, ಲಿಕ್ವಿಡಿಟಿ ಪ್ರಮಾಣ, ಶಾಖೆಗಳನ್ನು ತೆರೆಯುವಾಗ ಅನುಸರಿಸುತ್ತಿರುವ ಮಾನದಂಡಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಸೌಹಾರ್ದ ಸಹಕಾರಿಗಳು ಶಾಸನಬದ್ಧವಾಗಿ ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳು, ಇ–ಸ್ಟಾಂಪಿಂಗ್ ವ್ಯವಹಾರ ಇತ್ಯಾದಿ ವಿಷಯಗಳ ಬಗ್ಗೆ ಅವಲೋಕನ ಮಾಡಲಾಯಿತು. ಭಾರತೀಯ ರಿಸರ್ವ್ ಬ್ಯಾಂಕ್‌ನವರು ರೂ. 50,000/–ವರೆಗೆ ಪತ್ತಿನ ಸಹಕಾರಿ ಸಂಘಗಳು/ಸೌಹಾರ್ದ ಸಹಕಾರಿಗಳು ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್ಸ್ ಅನುಮತಿ ನೀಡಿರುವುದನ್ನು ಸಭೆಗೆ ತಿಳಿಸಲಾಯಿತು. ಕೆ.ವೈ.ಸಿ. ನಿಯಮಗಳನ್ನು ಪಾಲಿಸಿ ಈ ಸೌಲಭ್ಯವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲು ಸೂಚಿಸಲಾಯಿತು. ಈ ಸೌಲಭ್ಯವನ್ನು ಒದಗಿಸಲು ಪ್ರಯತ್ನಿಸಿದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಆಡಳಿತ ಮಂಡಳಿಯವರಿಗೆ ಕೃತಜ್ಞತೆಯನ್ನು ಸಲ್ಲಿಸಲಾಯಿತು.






# ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್‌ಗೆ ಅನುಮತಿ ಬಗ್ಗೆ ಪತ್ರಿಕಾಗೋಷ್ಠಿ

ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಪತ್ತಿನ ಸಹಕಾರ ಸಂಘಗಳು ಥರ್ಡ ಪಾರ್ಟಿ ಚೆಕ್ ಕಲೆಕ್ಶನ ಬಗ್ಗೆ ಅನೇಕ ದಿನಗಳ ಬೇಡಿಕೆಯನ್ನು ಭಾರತೀಯ ರಿಸರ್ವ ಬ್ಯಾಂಕಿನವರು ಪುರಸ್ಕರಿಸಿ ರೂ 50,000 ಗಳ ವರೆಗೆ ಚೆಕ್ಗಳನ್ನು ಪಾಸಮಾಡಲು ಅನುಮತಿಸಿರುವುದನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದಿನಾಂಕ 3–11–2010 ರಂದು ಬೆಂಗಳೂರಿನ ಪ್ರೆಸ್ಸ್ಕ್ಲಬ್ನಲ್ಲಿ ತಿಳಿಸಿದರು. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರದೊಂದಿಗೆ ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ ಅಸ್ಸೊಸಿಯೇಶನ ಬೆಂಗಳೂರು ಇವರ ಮೂಲಕ ನಡೆಸಿದ ಹೋರಾಡಕ್ಕೆ ಇಂದು ಪ್ರತಿಫಲ ಸಿಕ್ಕಿದೆ ಎಂದು ತಿಳಿಸಿ ಭಾರತೀಯ ರಿಸರ್ವ ಬ್ಯಾಂಕಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಉದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ ಅಸ್ಸೊಸಿಯೇಶನ ಬೆಂಗಳೂರುಇದರ ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತಿಕರ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಶ್ರೀನಿವಾಸಮೂರ್ತಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ರಾಜ್ಯದ 28 ಜಿಲ್ಲೆಗಳಲ್ಲಿ 117 ತಾಲ್ಲೂಕುಗಳ 295 ಕೇಂದ್ರಗಳಲ್ಲಿ ಇ–ಸ್ಟಾಂಪಿಂಗ ವ್ಯವಹಾರ ಉತ್ತಮವಾಗಿ ನಡೆಯುತ್ತಿದ್ದು ಸೌಹಾರ್ದ ಸಹಕಾರಿಗಳು ಮುಂಚೂಣಿಯಲ್ಲಿದ್ದಾರೆಂದು ತಿಳಿಸಿದರು. ಮೈಸೂರಿನಲ್ಲಿ ಸೌಹಾರ್ದ ಸಹಕಾರಿಗಳ ಅಧಿಕಾರಿಗಳಿಗಾಗಿ ದಿನಾಂಕ 25–11–2010 ರಿಂದ 4–12–2010 ರವರೆಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೆಂದು ಮತ್ತಿ ಇದು ದಶಮಾನೋತ್ಸವ ವರ್ಷವಾಗಿದ್ದು ಸಹಕಾರಿಗಳೆಲ್ಲ ಅತ್ಯಂತ ಪರಿಣಾಮಕಾರಿಯಾಗಿ ದಶಮಾನೋತ್ಸವವನ್ನು ಆಚರಿಸಬೇಕೆಂದು ಮನವಿಮಾಡಿದರು.








ಯಶಸ್ವಿ ಮಹಿಳಾ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಬಿಳಗಿ



ಶ್ರೀ ಚನ್ನೇಶ ಸೌಹಾರ್ದ ಸಹಕಾರಿ ರಾಣೆಬೆನ್ನೂರ



ಶ್ರೀ ಶಾರದಾ ಸೌಹಾರ್ದ ಸಹಕಾರಿ ಜಯನಗರ ಮೈಸೂರು



ಶ್ರೀ ಸುವರ್ಣ ಸೌಹಾರ್ದ ಪತ್ತಿನ ಸಹಕಾರಿ ತುಮಕೂರು



ಶ್ರೀ ಸುಭಾಷ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ ಭದ್ರಾವತಿ


ಶ್ರೀ ಬಾಲಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ ವಿಜಾಪುರ

## ಮೈಸೂರಿನಲ್ಲಿ 10 ದಿನಗಳ ವಿಶೇಷ ಅಲ್ಪಾವಧಿ ತರಬೇತಿ ಕಾರ್ಯಕ್ರಮ

ದಿನಾಂಕ 25–11–2010 ರಿಂದ 4–12–2010 ರವರೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಧಿಕಾರಿ/ಸಿಬ್ಬಂದಿ ವರ್ಗದವರಿಗಾಗಿ 10 ದಿನಗಳ ವಿಶೇಷ ಅಲ್ಪಾವಧಿ ತರಬೇತಿ ಶಿಬಿರವನ್ನು ಬ್ರಹ್ಮಕುಮಾರಿ ಜ್ಞಾನಸರೋವರ,ಲಿಂಗದೇವರ ಹಳ್ಳಿ ಹುಣಸೂರು ರಸ್ತೆ ಮೈಸೂರು (ಮೈಸೂರಿನಿಂದ ಇಲವಾಲಕ್ಕೆ ಹೋಗುವ ರಸ್ತೆಯಲ್ಲಿ 8 ಮೈಲು ದೂರ) ಇಲ್ಲಿ ಏರ್ಪಡಿಸಿದೆ. ಉತ್ತಮ ಪರಿಸರ ವಸತಿ ಊಟ, ಉಪಾಹಾರ ಒಳ್ಳೆಯ ವಿಷಯಗಳು ಪರಿಣಿತ ಉಪನ್ಯಾಸಕಾರರಿಂದ ಉಪನ್ಯಾಸಗಳ ವ್ಯವಸ್ಥೆಯಿದೆ. ಕೇವಲ 40 ಜನರಿಗೆ ಮಾತ್ರ ಪ್ರವೇಶ ಅವಕಾಶವಿದ್ದು ಆಸಕ್ತಿ ಯುಳ್ಳವರು ತಲಾ ರೂ. 5000/–ಪ್ರವೇಶ ಶುಲ್ಕದೊಂದಿಗೆ ನೊಂದಾಯಿಸಲು ಕೋರಿದೆ.

## ಸಪ್ತರ್ಷಿ ಸೌಹಾರ್ದ ಸಹಕಾರಿಯ ಕಟ್ಟಡ ಉದ್ಘಾಟನೆ

ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿಯ ಕಟ್ಟಡದ ಒಂದನೇಯ ಮಹಡಿ ಉದ್ಘಾಟನೆಯನ್ನು ವೈದ್ಯಕೀಯ ಶಿಕ್ಷಣ ಸಚಿವ ಶ್ರೀ ರಾಮದಾಸರವರು ಉದ್ಘಾಟಿಸಿ ಸಹಕಾರಿಯ ಪ್ರಗತಿಯ ಬಗ್ಗೆ ಸಂತೋಷ ವ್ಯಕ್ತಪಡಿಸಿ ಶುಭಹಾರೈಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಹಾಗೂ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಹೆಚ್.ವಿ.ರಾಜೀವ್‌ರವರು,ರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರ ಚಳುವಳಿ ಉತ್ತಮವಾಗಿ ಪ್ರಗತಿಯನ್ನು ಸಾಧಿಸುತ್ತಿದೆ. ಸ್ವಾಯತ್ತತೆ ಸ್ವಯಂ ನಿಯಂತ್ರಣ ಹಾಗು ಸ್ವಯಂ ಆಡಳಿತದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಈ ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ಮೆಚ್ಚಿದ್ದಾರೆ ಎಂದು ತಿಳಿಸಿ ಸಪ್ತರ್ಷಿ ಸೌಹಾರ್ದ ಸಹಕಾರಿಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿ ಸಹಕಾರಿಯ ಅಧ್ಯಕ್ಷರಿಗೆ ಆಡಳಿತ ಮಂಡಳಿಗೆ ಹಾಗು ಸದಸ್ಯರನ್ನು ಅಭಿನಂದಿಸಿದರು. ಹಾಗು ಶುಭಕೋರಿದರು. ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಪ್ರಕಾಶರಾವ ಅನೇಕ ಗಣ್ಯರು ಭಾಗವಹಿಸಿದ್ದರು. ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನುಸಹಕಾರಿಯ ಅಧ್ಯಕ್ಷ ಶ್ರೀಮತಿ ಎಸ್.ಶಾಮಲರವರು ವಹಿಸಿದ್ದರು.



## ಬೈಲಹೊಂಗಲ, ತುಮಕೂರು ಸಹಕಾರಿಗಳಲ್ಲಿ ಇ-ಸ್ಟಾಂಪಿಂಗ್ ಉದ್ಘಾಟನೆ



ಬೈಲಹೊಂಗಲದ ಶ್ರೀ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಇ-ಸ್ಟಾಂಪಿಂಗ ವ್ಯವಹಾರವನ್ನು ದಿನಾಂಕ 17-9-2010 ರಂದು ಬೈಲಹೊಂಗಲ ಶಾಸಕರಾದ ಶ್ರೀ ಜಗದೀಶ ಮೆಗುಡ್‌ರವರು ಉದ್ಘಾಟಿಸಿ ಸಾರ್ವಜನಿಕರಿಗೆ ಸೇವೆ ಸಲ್ಲಿಸಲು ಸೌಹಾರ್ದ ಸಹಕಾರಿಗಳಿಗೆ ಅವಕಾಶ ನೀಡಿರುವುದು ಸ್ವಾತಾರ್ಹವಾಗಿದೆ ಎಂದು ತಿಳಿಸಿ ಸಹಕಾರಿಗೆ ಶುಭ ಹಾರೈಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಶಿವಡಣ್ಣನವರು ವಹಿಸಿದ್ದರು. ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಯವರು ಅನೇಕ ಸದಸ್ಯರು ಉಪಸ್ಥಿತರಿದ್ದರು.




ತುಮಕೂರಿನ ಕೆ.ಎನ್.ಆರ್.ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ದಿನಾಂಕ 22-9-2010 ರಂದು ಇ-ಸ್ಟಾಂಪಿಂಗ ಸೇವೆಯನ್ನು ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರು ಉದ್ಘಾಟಿಸಿದರು.ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಲಕ್ಷ್ಮೀನಾರಾಯಣ,ಮಧುಗಿರಿ ಪುಸಭಾ ಅಧ್ಯಕ್ಷ ಶ್ರೀಎಮ್. ಕೆ.ನಂಜುಂಡಯ್ಯ ಡಿ.ಸಿ.ಸಿ.ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ನರಸಿಂಹಮೂರ್ತಿಯವರು ಸಹಕಾರಿಯ ನಿರ್ದೇಶಕರು ಸದಸ್ಯರು ಹಾಗು ಸಾರ್ವಜನಿಕರು ಉಪಸ್ಥಿತರಿದ್ದರು.



### ರಾಜ್ಯದಲ್ಲಿ 2009-10ನೇ ಸಾಲಿನಲ್ಲಿ ನೂತನವಾಗಿ ನೊಂದಾಯಿತವಾಗಿ ಕಾರ್ಯನಿರ್ವಹಿಸುತ್ತಿರುವ

## ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಶಿಬಿರ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 23-10-2010 ರಂದು ಬೆಳಿಗ್ಗೆ ರಾಜ್ಯದಲ್ಲಿ 2009-10 ನೇ ಸಾಲಿನಲ್ಲಿ ಹೊಸದಾಗಿ ನೊಂದಾವಣೆಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ನಿರ್ದೇಶಕರು ಹಾಗು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಪ್ರವೇಶ ತರಬೇತಿ ಶಿಬಿರವನ್ನು ಎರ್ಪಡಿಸಲಾಗಿತ್ತು.

ಈ ಕಾರ್ಯಕ್ರವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶಚಂದ್ರರವರು ಉದ್ಘಾಟಿಸಿ ಮಾತನಾಡುತ್ತ ರಾಜ್ಯದಲ್ಲಿ ಸಹಕಾರ ಚಳುವಳಿಗೆ 105 ವರ್ಷಗಳ ಇತಿಹಾಸವಿದೆ. ಅನೇಕ ಸಾಧನೆಗಳನ್ನು ಮಾಡಿ ದೇಶದಲ್ಲಿ ಹಸಿರು ಕ್ರಾಂತಿ ಹಾಗು ಶ್ವೇತ ಕ್ರಾಂತಿಗಳನ್ನು ಮಾಡಿ ಗ್ರಾಮೀಣ ಅಭಿವೃದ್ಧಿಗೆ ಕಾರಣವಾಗಿದೆ. ಸ್ವಾಯತ್ತತೆ ಸ್ವಯಂನಿಯಂತ್ರಣ ಹಾಗೂ ಸ್ವಯಂ ಆಡಳಿತಗಳ ತಳಹದಿಯ ಆಧಾರದ ಮೇಲೆ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳವಳಿ ಪ್ರಾರಂಭವಾಗಿ 10 ವರ್ಷಗಳಾಗಿವೆ. ಈ ಹತ್ತು ವರ್ಷದಲ್ಲಿ 1450 ಸಹಕಾರಿಗಳು ಪ್ರಾರಂಭವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿಗಳ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗು ಪೂರಕವಾದ ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ಎಲ್ಲ ವಿಷಯಗನ್ನು ತಮಗೆಲ್ಲ ತಿಳಿಯಪಡಿಸಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲರೂ ಇದರ ಪ್ರಯೋಜನ ಪಡೆಯಬೇಕು ಎಂದರು. ಈ ಕಾರ್ಯಕ್ರಮ ಸಂಘಟನೆಯಲ್ಲಿ ರಾಜ್ಯ ಸಹಕಾರ ಮಹಾಮಂಡಳ ನೆರವು ನೀಡಿದೆ. ಅದಕ್ಕಾಗಿ ಧನ್ಯವಾದಗಳು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ವಹಿಸಿ ಅಭ್ಯರ್ಥಿಗಳಿಗೆ ಶುಭಹಾರೈಸಿದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎನ್.ಶ್ರೀನಿವಾಸಮೂರ್ತಿ ಆರ್.ಐ.ಸಿ.ಎಮ್. ಪ್ರಾಂತೀಯ ನಿರ್ದೇಶಕ ಶ್ರೀ ಪಿ.ಆರ್. ಸಿದ್ಧಾಂತಿಯವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಡಿ.ಜಿ.ಎಮ್. ಶ್ರೀ ವೈ. ಕುಮಾರರವರು ಸ್ವಾಗತಿಸಿದರು. ಮಹಾಮಂಡಳದ ಸಾರ್ವಜನಿಕ ಸಂಪರ್ಕಅಧಿಕಾರಿ ಶ್ರೀಮತಿ ಹೆಚ್. ಎಸ್.ಪೂರ್ಣಿಮರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಾಯಕ ಸಹಕಾರಿ ಶಿಕ್ಷಣಾಧಿಕಾರಿ ಶ್ರೀ ಜಿ.ಬಿ.ರಂಗಸ್ವಾಮಿಯವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಸಿ.ಎನ್.ಪರಶಿವಮೂರ್ತಿ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು " ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗು ಮುಖ್ಯಾಂಶಗಳು" ವಿಷಯವಾಗಿ ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಭೆಗಳು ಹಾಗು ಅವುಗಳ ಪ್ರಾಮುಖ್ಯತೆಯ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ಸೂಚಿಸಿದರು. ಪ್ರಶ್ನೋತ್ತರ ಅಧಿವೇಶನದ ನಂತರ ಸಮಾರೋಪದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.